# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 344 (398) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಅ. ದೇವೇಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸುವ ಸಚಿವರು | : | ಮಾನ್ಯ ಉನ್ನತ ಶಿಕ್ಷಣ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 10.07.2023 |

| ಕ್ರಮ. ಸಂಖ್ಯೆ. | ಪ್ರಶ್ನೆ | ಉತ್ತರ |
|---|---|---|
| (ಅ) | ಬೆಂಗಳೂರು ವಿಶ್ವವಿದ್ಯಾಲಯದಲ್ಲಿ 2002ರಲ್ಲಿ ನಾಡಪ್ರಭು ಕೆಂಪೇಗೌಡ ಅಧ್ಯಯನ ಕೇಂದ್ರ ಸ್ಥಾಪಿಸಲು ಪ್ರಸ್ತಾಪಿಸಿದ್ದು ಇಲ್ಲಿಯವರೆಗೆ ಕ್ರಮ ಕೈಗೊಳ್ಳದಿರಲು ಕಾರಣವೇನು; | ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಈಗಾಗಲೇ ನಾಡಪ್ರಭು ಕೆಂಪೇಗೌಡ ಅಧ್ಯಯನ ಕೇಂದ್ರವನ್ನು 2002 ರಲ್ಲಿಯೇ ಸ್ಥಾಪಿಸಲಾಗಿದೆ. ಅಲ್ಲಿಂದ ಇಲ್ಲಿಯವರೆಗೆ ಅದು ತನ್ನ ಕಾರ್ಯ ಚಟುವಟಿಕೆಗಳನ್ನು ಚಾಚೂ ತಪ್ಪದೇ ಮಾಡುತ್ತಿದ್ದು, ಪುಸ್ತಕ ಪ್ರಕಟಣೆ, ಕ್ಷೇತ್ರಕಾರ್ಯ, ಮಾಗಡಿ ತಾಲ್ಲೂಕಿನ ಕೆಂಪಾಪುರದಲ್ಲಿರುವ ನಾಡಪ್ರಭುಗಳ ವೀರಸಮಾಧಿಯ ಅಧ್ಯಯನ ಮಾಡಿ ಸರ್ಕಾರ ಮತ್ತು ಬಿ.ಬಿ.ಎಂ.ಪಿ ಗೆ ವರದಿ ನೀಡಲಾಗಿದೆ.<br><br>ಸದರಿ ಕೇಂದ್ರದ ವತಿಯಿಂದ ನಾಡಪ್ರಭುಗಳ ಬಗ್ಗೆ ಐದು ವಿದ್ಯಾರ್ಥಿಗಳಿಂದ ಕಿರು ಸಂಶೋಧನೆಯನ್ನು ಮಾಡಿಸಲಾಗಿದೆ. ಅವರು ಮಂಡಿಸಿದ ಪ್ರೌಢ ಪ್ರಬಂಧಗಳನ್ನು ಕೇಂದ್ರದಲ್ಲಿ ಮಾದರಿಯಾಗಿ ಸಂರಕ್ಷಿಸಿದೆ. ರಾಜವೃಕ್ಷ ಮತ್ತು ವಂಶವೃಕ್ಷಗಳನ್ನು ಕೇಂದ್ರದಲ್ಲಿ ಸಿದ್ಧಪಡಿಸಿಟ್ಟುಕೊಳ್ಳಲಾಗಿದೆ. ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದ ಉಪನ್ಯಾಸಗಳನ್ನು ನಡೆಸಿರುವುದರ ಜೊತೆಗೆ ವೀರಗಲ್ಲುಗಳ ಪರಿಚಯ ಮತ್ತು ವಿವರಣೆಯನ್ನು ನೀಡಲಾಗಿದೆ. ಪ್ರತಿ ವರ್ಷವು ಕೇಂದ್ರವು ನಾಡಪ್ರಭುಗಳ ಜನ್ಮದಿನಾಚರಣೆ ಯನ್ನು ಹಮ್ಮಿಕೊಂಡು ಹತ್ತು ಹಲವಾರು ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ. |

| | | |
|---|---|---|
| (ಆ) | ಕ್ರಮ ಕೈಗೊಳ್ಳದಿದ್ದಲ್ಲಿ ಯಾವಾಗ ಕೆಂಪೇಗೌಡ ಅಧ್ಯಯನ ಪೀಠವನ್ನು ಸ್ಥಾಪಿಸಲಾಗುವುದು? | ಬೆಂಗಳೂರು ವಿಶ್ವವಿದ್ಯಾಲಯ ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗಳೆರಡರ ಒಡಂಬಿಕೆಯಂತೆ ಮೊದಲ ಕಂತಿನ ಮೊತ್ತವಾಗಿ ಬಿಬಿಎಂಪಿಯು ನಾಡಪ್ರಭು ಕೇಂಪೇಗೌಡರ ಸಂಶೋಧನಾ ಅಧ್ಯಯನ ಕೇಂದ್ರದ ಕಟ್ಟಡವನ್ನು ನಿರ್ಮಿಸುವ ಉದ್ದೇಶದಿಂದ ರೂ.50 ಕೋಟಿಯನ್ನು ನೀಡಿದ್ದು, ಪ್ರಸ್ತುತ ಜ್ಞಾನಭಾರತಿಯಲ್ಲಿರುವ ಮೂರು ಎಕರೆ ಪ್ರದೇಶದಲ್ಲಿ ನಾಡಪ್ರಭು ಕೆಂಪೇಗೌಡರ ಸಂಶೋಧನಾ ಅಧ್ಯಯನ ಕೇಂದ್ರ ಕಟ್ಟಡದ ಕಾಮಗಾರಿಯು ಕ್ಷಿಪ್ರಗತಿಯಲ್ಲಿ ನಡೆಯುತ್ತಿದೆ. |

**ಸಂಖ್ಯೆ: ಇಡಿ/134/ಯುಬಿವಿ /2023**

**(ಡಾ|| ಎಂ.ಸಿ. ಸುಧಾಕರ್)**
ಉನ್ನತ ಶಿಕ್ಷಣ ಇಲಾಖೆ.
ಬೆಂಗಳೂರು.